**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ- 41/2017**

ಪಿ.ಡಬ್ಲ್ಯೂಃ- 2

ಸಿ.ಡಬ್ಲ್ಯೂಃ- 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪ್ರಭುವಯ್ಯ |
| ತಂದೆಯ ಹೆಸರುಃ | : | ಚನ್ನಬಸವಯ್ಯ |
| ವಯಸ್ಸುಃ | : | 65 ವರ್ಷ |
| ವೃತ್ತಿಃ | : | ನಿವೃತ ಬಿ ಎಸ್ ಎನ್ ಎಲ್ ಉದ್ಯೋಗಿ |
| ವಾಸಃ | : | ವಿಜಯ ನಗರ, ಹಾಸನ |

**ದಿನಾಂಕಃ 24-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ಕುಮಾರಸ್ವಾಮಿ ನನ್ನ ತಮ್ಮ. 7 ವರ್ಷದ ಹಿಂದೆ ನನ್ನ ತಮ್ಮ ಮೃತ ಪಟ್ಟಿರುತ್ತಾರೆ. ನನ್ನ ತಮ್ಮ ಕುಮಾರಸ್ವಾಮಿ ಕೊಲೆಯಾಗಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರು 1 ರಿಂದ 5 ನನಗೆ ಗೊತ್ತು. ನಾವು ಒಟ್ಟು 6 ಜನ ಅಣ್ಣ-ತಮ್ಮಂದಿರು. ಶಾಂತಮಲ್ಲಯ್ಯ, ನಾನು, ಮೃತ ಕುಮಾರಸ್ವಾಮಿ, ಪುಟ್ಟಬಸವಯ್ಯ, ಚಾಸಾ-10 ನಟರಾಜ ಮತ್ತು ಚಾಸಾ-1 ಪಾಲಾಕ್ಷ ನಾವು ಒಟ್ಟು 6 ಜನ ಸಹೋದರರು. 5 ನೇ ಆರೋಪಿ ವಿಶಾಲಾಕ್ಷಿ ಹಾಗೂ ನಂಜಮ್ಮ ನನ್ನ ತಂಗಿಯರು. 5 ನೇ ಆರೋಪಿತೆ ವಿಶಾಲಾಕ್ಷಿ ಅಂಗನವಾಡಿಯಲ್ಲಿ ಕೆಲಸ ಮಾಡುತ್ತಾರೆ. 1 ನೇ ಆರೋಪಿ ಮಲ್ಲಿಕಾರ್ಜುನ 5 ನೇ ಆರೋಪಿಯ ವಿಶಾಲಾಕ್ಷಿಯ ಗಂಡ. 2 ನೇ ಆರೋಪಿ ಪರಮೇಶ, 1 ನೇ ಆರೋಪಿಯ ತಮ್ಮ, ಆರೋಪಿ 3 ರವಿ ಹಾಗೂ 4 ನೇ ಆರೋಪಿ ಓಂಕಾರ ರವರು 1 ನೇ ಆರೋಪಿತನ

ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು.

2. 1992 ರಲ್ಲಿ ಇಭ್ಲಾನೆ ಗ್ರಾಮದ ಸರ್ವೆ ನಂ.93 ರಲ್ಲಿ ಸೈಟ್ ನಂ.56 ನನಗೆ ಮಂಜೂರಾಗಿತ್ತು. ಅದರ ವಿಸ್ತೀರ್ಣ 40X30 ಅಡಿಗಳು ಇತ್ತು. 1995 ರಲ್ಲಿ ಮೃತ ಕುಮಾರಸ್ವಾಮಿ ಹಾಗೂ ಆತನ ಪತ್ನಿ ವನಜಾಕ್ಷಿ ರವರಿಗೆ ಇಭ್ಲಾನೆ ಗ್ರಾಮದ ಸರ್ವೆ ನಂ.93 ರಲ್ಲಿ ಸೈಟ್ ನಂ. 57 ಮಂಜೂರಾಗಿತ್ತು. ಅದರ ವಿಸ್ತೀರ್ಣ 40X30 ಅಡಿಗಳು ಇತ್ತು. ನನಗೆ ಮಂಜೂರಾದ ಸೈಟನಲ್ಲಿ ಹೆಂಚಿನ ಮನೆ ನಿರ್ಮಾಣ ಮಾಡಿದ್ದೆ. ಕುಮಾರಸ್ವಾಮಿಗೆ ಮಂಜೂರಾದ ಸೈಟುನ್ನು ಅವರು ಖಾಲಿ ಬಿಟ್ಟಿದ್ದರು. ನಾನು ಮೇಲೆ ಕಾಣಿಸಿದ ಸೈಟಿನಲ್ಲಿ ನಿರ್ಮಿಸಿದ ಮನೆಯಲ್ಲಿ ಸುಮಾರು 10 ವರ್ಷಗಳ ಕಾಲ ವಾಸವಾಗಿದ್ದೆ. ನಂತರ ನಾನು 2015 ರಲ್ಲಿ ಸದರಿ ಮನೆಯನ್ನು 1 ಹಾಗೂ 5 ನೇ ಆರೋಪಿಗಳಿಗೆ ರೂ.3,80,000/- ಗಳಿಗೆ ಮಾರಾಟ ಮಾಡಿ, ಹಾಸನದ ವಿಜಯ ನಗರಕ್ಕೆ ವಾಸ ಮಾಡಲು ಹೋಗಿರುತ್ತೇನೆ. ನಾನು ಮಾರಾಟ ಮಾಡಿದ ಮನೆಯಲ್ಲಿ 1 ನೇ ಹಾಗೂ 5 ನೇ ಆರೋಪಿಗಳು ವಾಸ ಮಾಡುತ್ತಿದ್ದರು.

3. ಸೈಟ್ ನಂ.57 ರಲ್ಲಿ ಕುಮಾರಸ್ವಾಮಿಯವರು ಒಂದು ಶೆಡ್ ಕಟ್ಟಲು ಪ್ರಯತ್ನಿಸುತ್ತಿದ್ದಾಗ ಆರೋಪಿ 1 ರಿಂದ 5 ರವರು ಅವರಿಗೆ ಶೆಡ್ ಕಟ್ಟದಂತೆ ತೊಂದರೆ ನೀಡಿ, ಗಲಾಟೆ ಮಾಡುತ್ತಿದ್ದರು ಹಾಗೂ ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದರು. ಈ ರೀತಿ 5-6 ಬಾರಿ ಗಲಾಟೆಯಾಗಿರುತ್ತದೆ. ನಂತರ ಕುಮಾರಸ್ವಾಮಿ ಹಾಗೂ ಆತನ ಪತ್ನಿ ನನ್ನ ಬಳಿ ಬಂದು 1 ಹಾಗೂ 5 ನೇ ಆರೋಪಿಗಳಿಗೆ ನಾನು ಸೈಟೆ ಮಾರಾಟ ಮಾಡಿರುತ್ತೇನೋ ಎಂದು ಪ್ರಶ್ನೆ ಮಾಡಿದರು. ನಾನು ಯಾವುದೇ ಹಣ ಪಡೆದಿಲ್ಲ ಹಾಗೂ ಯಾವುದೇ ಸೈಟನ್ನು 1 ಹಾಗೂ 5 ನೇ ಆರೋಪಿಗಳಿಗೆ ಮಾರಾಟ ಮಾಡಿಲ್ಲ ಎಂದು ನಾನು ಕುಮಾರಸ್ವಾಮಿ ಹಾಗೂ ಆತನ ಪತ್ನಿಗೆ ಹೇಳಿರುತ್ತೇನೆ. ನಂತರ

ಕುಮಾರಸ್ವಾಮಿರವರ ಅವರ ಸೈಟಿನಲ್ಲಿ ಕಾಲ ಕ್ರಮೇಣ ಶೆಡ್ ನಿರ್ಮಾಣ ಮಾಡಿಕೊಂಡರು

4. ದಿ. 28.11.2016 ರಂದು ಬೆಳಗ್ಗೆ 8.00 ಗಂಟೆ ಸಮಯಲ್ಲಿ ನನ್ನ ತಮ್ಮ ಕುಮಾರಸ್ವಾಮಿ ರವರು ಚಾಸಾ−1 ಪಾಲಾಕ್ಷ, ಚಾಸಾ−3 ಕುಮಾರ, ಚಾಸಾ−4 ಅಣ್ಣಪ್ಪ, ಚಾಸಾ−5 ರಾಜಯ್ಯ, ಚಾಸಾ−6 ಶಂಕರ ರವರ ಜೊತೆ ಸೇರಿ, ಇಭ್ಧಾನೆ ಗ್ರಾಮದ ಸೈಟ್ ನಂ.57 ನ್ನು ಸ್ವಚ್ಚಗೊಳಿಸಲು ಹೋಗಿರುತ್ತಾರೆ. ಚಾಸಾ−3 ರಿಂದ 6 ರವರು ಕಾಟಿಹಳ್ಳಿ ಗಾಮಸ್ಥರು. ನನ್ನ ಸ್ವಂತ ಊರು ಕಾಟಿಹಳ್ಳಿ. ನನ್ನ ತಮ್ಮ ಕುಮಾರಸ್ವಾಮಿ ರವರು ಚಾಸಾ−1, ಚಾಸಾ−3 ರಿಂದ 6 ರವರ ಜೊತೆ ಸೈಟು ಸ್ವಚ್ಚಗೊಳಿಸಲು ಹೋದ ಕಾಲದಲ್ಲಿ ಆರೋಪಿತರು ಅವರ ಜೊತೆ ಜಗಳ ತೆಗೆದು, 1 ನೇ ಆರೋಪಿ ಮಲ್ಲಿಕಾರ್ಜುನ ಎಂದು ದೊಣ್ಣೆಯಿಂದ ನನ್ನ ತಮ್ಮ ಕುಮಾರಸ್ವಾಮಿಗೆ ತಲೆಗೆ ಮತ್ತು ಮೈ ಕೈಗೆ ಹೊಡೆದ ಎಂದು ತಿಳಿದು ಬಂತು. 2 ನೇ ಆರೋಪಿ ಪರಮೇಶ ಸಹ ನನ್ನ ತಮ್ಮ ಕುಮಾರಸ್ವಾಮಿಗೆ ಹೊಡೆದ ಎಂದು ನನಗೆ ತಿಳಿದುಬಂತು. ಜಗಳ ಬಿಡಿಸಲು ಹೋದ ಚಾಸಾ−1 ಪಾಲಾಕ್ಷ ರವರಿಗೆ, 3 ಹಾಗೂ 4 ನೇ ಆರೋಪಿಗಳು ಸಹ ಹೊಡೆದರು ಎಂದು ನನಗೆ ತಿಳಿದುಬಂತು. ನಂತರ ಚಾಸಾ−3 ರಿಂದ 6 ರವರು ಜಗಳ ಬಿಡಿಸಲು ಹೋದಾಗ ಆರೋಪಿತರು ದೊಣ್ಣೆ ಎಸೆದು, ಓಡಿ ಹೋದರು ಎಂದು ತಿಳಿದು ಬಂತು. ಗಾಯಗೊಂಡಿದ್ದ ಕುಮಾರಸ್ವಾಮಿ ಹಾಗೂ ಪಾಲಾಕ್ಷ ರವರನ್ನು ಚಾಸಾ−3 ರಿಂದ 6 ರವರು ಯಾವುದೋ ಎಂದು ವಾಹನದಲ್ಲಿ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ದಾಖಲಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ−1 ಪಾಲಾಕ್ಷ ಆಸ್ಪತ್ರೆಯಲ್ಲಿ ಗ್ರಾಮಾಂತರ ಪೊಲೀಸ್ ರವರಿಗೆ ಅವರ ಹೇಳಿಕೆಯನ್ನು ನೀಡಿರುತ್ತಾರೆ. ಗಾಯಗೊಂಡಿದ್ದ ಕುಮಾರಸ್ವಾಮಿ ಹಾಗೂ ಪಾಲಾಕ್ಷ ರವರಿಗೆ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದ್ದು, ಅವರನ್ನು ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ವೈದ್ಯರು ಸೂಚಿಸಿರುತ್ತಾರೆ. ಮಣಿಪಾಲ ಆಸ್ಪತ್ರೆಯ ವೈದ್ಯರು

ಗಾಯಾಳು ಕುಮಾರಸ್ವಾಮಿ ಹಾಗೂ ಪಾಲಾಕ್ಷ ರವರನ್ನು ಚಿಕಿತ್ಸೆಗಾಗಿ ಉಡುಪಿಯ ಆರ್ದಶ ಆಸ್ಪತ್ರೆಗೆ ದಾಖಲಿಸುವಂತೆ ಸೂಚಿಸಿದರು. ನಂತರ ಗಾಯಾಳು ಕುಮಾರಸ್ವಾಮಿ ಹಾಗೂ ಪಾಲಾಕ್ಷ ರವರನ್ನು ಉಡುಪಿಯ ಆದರ್ಶ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿತು.

5. ದಿ. 29.11.2016 ರ ಮಧ್ಯಾಹ್ನ 2.30 ಕ್ಕೆ ಕುಮಾರಸ್ವಾಮಿರವರು ಮೃತಪಟ್ಟಿರುತ್ತಾರೆ. ಈ ಬಗ್ಗೆ ನನಗೆ ಚಾಸಾ-10 ನಟರಾಜ ಪೋನ್ ಮಾಡಿ ತಿಳಿಸಿರುತ್ತಾರೆ. ನಂತರ ನಾನು ಅದೇ ದಿನ ಸಂಜೆ 5.00 ಕ್ಕೆ ಹಾಸನದ ಗ್ರಾಮಾಂತರ ಠಾಣೆಗೆ ಹೋಗಿ ಟೈಪ್ ಮಾಡಿಸಿದ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ಅವರ ದೂರನ್ನು ನಿಪಿ-4 ಎಂದು, ನಿಪಿ-4 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಿ. 01.12.2016 ರಂದು ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಮರು ಹೇಳಿಕೆಯನ್ನು ಪಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ 5 ಜನ ಆರೋಪಿತಗಳು ನನ್ನ ತಮ್ಮ ಕುಮಾರಸ್ವಾಮಿಯನ್ನು ನಿವೇಶನ ಸಂಖ್ಯೆ 57 ಕ್ಕೆ ಸಂಬಂಧಿಸಿದಂತೆ ಕೊಲೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಕೀಲರಿಂದಃ**

ಪಾಟೀ ಸವಾಲನ್ನು ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.